ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	558
ಸದಸ್ಯರ ಹೆಸರು	:	ಶ್ರೀ ಕೆ.ಸಿ. ಕೊಂಡಯ್ಯ (ಸ್ಥಳೀಯ ಸಂಸ್ಥೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ:	:	16.12.2021
ಉತ್ತರಿಸಬೇಕಾದ ಸಚಿವರು	:	ಮುಖ್ಯಮಂತ್ರಿ

****

ಕ್ರ.ಸಂ.	ಪ್ರಶ್ನೆ	ಉತ್ತರ
(ಅ)	ಬೆಂಗಳೂರು ಹೆಚ್.ಎಸ್.ಆರ್. ಬಡಾವಣೆಯ 6ನೇ ಸೆಕ್ಟರ್ ನಲ್ಲಿರುವ ನಿವೇಶನ ಸಂಖ್ಯೆ: 575/ಬಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸ್ವತ್ತಾಗಿರುತ್ತದೆಯೇ;	ಹೆಚ್.ಎಸ್.ಆರ್. ಬಡಾವಣೆಯ 6ನೇ ಸೆಕ್ಟರ್‌ನಲ್ಲಿರುವ ನಿವೇಶನ ಸಂಖ್ಯೆ: 575/ಬಿ ಅನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅನುಮೋದಿತ ನಕ್ಷೆಯಲ್ಲಿ ಅಳವಡಿಸಿಕೊಳ್ಳಲಾಗಿದ್ದು, ಮಾನ್ಯ ನ್ಯಾಯಾಲಯದ ಆದೇಶದಂತೆ ಸದರಿ ಸ್ವತ್ತಿಗೆ ನಿವೇಶನ ಸಂಖ್ಯೆ: 123 ಎಂದು ಕೇಂದ್ರೀಯ ಉಪಾಧ್ಯಯರ ಸಂಘದ ವತಿಯಿಂದ ಶ್ರೀಮತಿ ಉಷಾರೆಡ್ಡಿ ಎಂಬುವವರಿಗೆ ಹಂಚಿಕೆಯಾಗಿರುವುದಾಗಿ ತೀರ್ಪು ನೀಡಲಾಗಿರುತ್ತದೆ.
(ಆ)	ಹಾಗಿದ್ದಲ್ಲಿ, ಈ ನಿವೇಶವನ್ನು ಏತಕ್ಕಾಗಿ ಬಿ.ಡಿ.ಎ. ಸುಪರ್ದಿಗೆ ಪಡೆದುಕೊಂಡಿರುವುದಿಲ್ಲ ಮತ್ತು ಅಕ್ರಮವಾಗಿ ಕಟ್ಟಡ ಕಟ್ಟಿ ಅನಧಿಕೃತವಾಗಿ ಬಳಕೆ ಮಾಡಿಕೊಳ್ಳುತ್ತಿರುವವರ ವಿರುದ್ಧ ಏಕೆ ಕ್ರಮ ಕೈಗೊಂಡಿಲ್ಲ;	ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಹೆಚ್.ಎಸ್.ಆರ್. ಬಡಾವಣೆ 6ನೇ ಸೆಕ್ಟರ್ ನ ನಿವೇಶನ ಸಂಖ್ಯೆ: 575/ಬಿರ ಜಾಗವನ್ನು ಕೇಂದ್ರೀಯ ಉಪಾಧ್ಯಾಯರ ಸಂಘದವರು ಶ್ರೀಮತಿ ಉಷಾರೆಡ್ಡಿ ರವರಿಗೆ 40 x 60 ಅಳತೆ ನಿವೇಶನಗಳಾಗಿ ನಿವೇಶನ ಸಂಖ್ಯೆ: 123 ಎಂದು ಹಂಚಿಕೆ ಮಾಡಿರುತ್ತಾರೆ. ಸದರಿ ನಿವೇಶನವನ್ನು ಕೇಂದ್ರೀಯ ಉಪಾಧ್ಯಾಯರ ಸಂಘದವರು ಹಂಚಿಕೆ ಮಾಡಿರುವ ಸಂಬಂಧ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ OS No 2536/2000 ರಲ್ಲಿ ದಾವೆ ದಾಖಲಿಸಿದ್ದು, ಸದರಿ ದಾವೆಗೆ ನ್ಯಾಯಾಲಯವು ದಿನಾಂಕ: 22.04.2006ರಲ್ಲಿನ ಆದೇಶದಲ್ಲಿ ಕೇಂದ್ರೀಯ ಉಪಾಧ್ಯಾಯರ ಸಂಘದಿಂದ ಹಂಚಿಕೆ ಪಡೆದಿರುವ ಸ್ವತ್ತಿನ ಮಾಲೀಕರ ಪರವಾಗಿ ತೀರ್ಪು ನೀಡಿದ್ದು, ಈ ಆದೇಶದ ಮೇಲೆ ಪ್ರಾಧಿಕಾರದ ವತಿಯಿಂದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ RFA No: 1380/2016 ರಲ್ಲಿ ಮೇಲ್ಮನವಿ ಸಲ್ಲಿಸಲಾಗಿ, ಮಾನ್ಯ ಉಚ್ಚ ನ್ಯಾಯಾಲಯವು ಸಿವಿಲ್ ನ್ಯಾಯಾಲಯದ ಆದೇಶವನ್ನು ಎತ್ತಿಹಿಡಿದಿರುತ್ತದೆ. ನ್ಯಾಯಾಲಯದ ಆದೇಶದಂತೆ ಸದರಿ ನಿವೇಶನವನ್ನು ಪ್ರಾಧಿಕಾರದ ವಶಕ್ಕೆ ತೆಗೆದುಕೊಳ್ಳಲು ಸಾಧ್ಯವಾಗಿರುವುದಿಲ್ಲ.
(ಇ)	ಅನಧಿಕೃತ ಬಳಕೆಗೆ ಬಿ.ಡಿ.ಎ.ಯ ಎಕ್ಸಿಕ್ಯೂಟಿವ್ ಇಂಜಿನಿಯರ್ ಹಾಗೂ ಇತರೆ ಅಧಿಕಾರಿಗಳು ಶಾಮೀಲಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದು, ಸರ್ಕಾರ ಈ ಅಧಿಕಾರಿಗಳ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳುವುದೇ?	ಸದರಿ ವಿಷಯದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಯಾವುದೇ ಅಧಿಕಾರಿಗಳು ಶಾಮೀಲಾಗಿರುವುದಿಲ್ಲ.

ನಅಇ 235 ಬೆಂಭೂಸ್ವಾ 2021

(ಬಸವರಾಜ ಬೊಮ್ಮಾಯಿ)

ಮುಖ್ಯಮಂತ್ರಿ